ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ -581 301

OFFICE OF THE DEPUTY COMMISSIONER, UTTARA KANNADA DISTRICT, KARWAR, -581 301

ದೂರವಾಣಿ : 08382 226406, 226471 Email: dckarwar@gmail.com

Telephone: 08382 226603 (Fax) Website: http://uttara kannada.nic.in

ನಂ.ಕೆ.ಎಲ್.ಎಲ್.ಎ.ಡಿಎಸ್/ಸಿಆರ್-03/2017-18 ದಿನಾಂಕ: 12-07-2017

# ಅಲ್ಪಾವಧಿ ಇ -ಟೆಂಡರ್

(ಇ- ಪ್ರೊಕ್ಯೂರಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಉತ್ತರ ಕನ್ನಡ ಜಿಲ್ಲೆಯ, ಕರ್ನಾಟಕ ಶಾಸಕರ ಸ್ಥಳಿಯ ಪ್ರದೇಶಾಭಿವೃದ್ಧಿ ಯೋಜನೆಯ ಪರಿಷ್ಕೃತ ಮಾರ್ಗಸೂಚಿಗಳು-2014ರ ಮಾರ್ಗಸೂಚಿಯ ಅನುಬಂಧ-III 1(10) ರಲ್ಲಿ ಶಾಸಕರ ಸ್ಥಳಿಯ ಪ್ರದೇಶಾಭೀವೃದ್ಧಿ ಅನುದಾನದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳು ಮತ್ತು ಪದವಿಪೂರ್ವ ಕಾಲೇಜುಗಳಿಗೆ ಗಣಕಯಂತ್ರ ಮತ್ತು ಪ್ರಿಂಟರ್ ಇತ್ಯಾದಿಗಳನ್ನು ಒದಗಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ ಕಾರವಾರ ವಿಧಾನ ಸಭಾ ಸದಸ್ಯರು ತಮ್ಮ ಕ್ಷೇತ್ರವ್ಯಾಪ್ತಿಯ ಫ್ರೌಢಶಾಲೆಗಳಿಗೆ ಹಾಜರಾತಿಗನುಗುಣವಾಗಿ ಪ್ರತಿ ಶಾಲೆಗೆ 1 ಕಂಪ್ಯೂಟರ್, 1 ಪ್ರಿಂಟರ್, ಹಾಗೂ 1 ಯು.ಪಿ.ಎಸ್ ಗಳನ್ನು ಒದಗಿಸಲು ರೂ. 4.00 ಲಕ್ಷಗಳನ್ನು ಬಿಡುಗಡೆ ಮಾಡಲು ಶೀಫಾರಸ್ಸು ಮಾಡಿರುತ್ತಾರೆ. ಶಾಸಕರ ಕ್ಷೇತ್ರ ವ್ಯಾಪ್ತಿಯ ಶಾಲಾ ಕಾಲೇಜುಗಳಿಗೆ ಅಗತ್ಯವಿರುವ ಗಣಕಯಂತ್ರಗಳು, **(Desktop Computers)** ಪ್ರಿಂಟರ್, ಸ್ಕ್ಯಾನರ್, ಯು.ಪಿ.ಎಸ್. ಗಳನ್ನು ಖರೀದಿಸಲು ತೀರ್ಮಾನಿಸಲಾಗಿದೆ.

ಕಾರಣ The Karnataka Transparency in Public Procurements Act, 1999 (as amended by Act 21 of 2001 and 4 of 2003) ಮತ್ತು 27ನೇ ನಿಯಮದಂತೆ ಶಾಸಕರ ಕ್ಷೇತ್ರ ವ್ಯಾಪ್ತಿಯ ಶಾಲಾ ಕಾಲೇಜುಗಳಿಗೆ ಈ ಟೆಂಡರ್ ಪ್ರಕಟಣೆಯೊಂದಿಗೆ ಲಗ್ತ ಇಟ್ಟಿರುವ **Tender Document** ನಲ್ಲಿ ನಮೂದಿಸಿದ ವಿವರಣೆಯುಳ್ಳ ಪೂರೈಸಲು ಪೂರ್ವಾರ್ಹತೆಯುಳ್ಳ ಟೆಂಡರುದಾರರಿಂದ (Pre qualified tenderers duly empanelled by e-governance) ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಆನ್ ಲೈನ್ ಮೂಲಕ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಟೆಂಡರನ್ನು ಇ-ಪ್ರೊಕ್ಯೂರಮೆಂಟ್ ಪೋರ್ಟಲ್ https://eproc.karnataka.gov.in ಮುಖಾಂತರ ಸಲ್ಲಿಸತಕ್ಕದ್ದು.

| ಅಲ್ಪಾವಧಿ ಇ-ಟೆಂಡರ್ ಘಟನಾವಳಿಗಳು | | |
|---|---|---|
| 1 | ಟೆಂಡರ್ ಅಂದಾಜು ಮೊತ್ತ | 20,00,000/- |
| 2 | ಖಾಲಿ ಟೆಂಟರ್ ಫಾರಂ ಬೆಲೆ | ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಪ್ರಕಾರ ಮಾತ್ರ |
| 3 | ಆನ್ ಲೈನ್ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ | ದಿ:05-08-2017 ರ ಸಾಯಂಕಾಲ 6-00 ಗಂಟೆಯವರೆಗೆ |
| 4 | ಆನ್ ಲೈನ್ ಟೆಂಡರ್ ತೆರೆಯುವ ಸ್ಥಳ | ಜಿಲ್ಲಾಧಿಕಾರಿಗಳ ಕಛೇರಿ, ಉತ್ತರ ಕನ್ನಡ, ಕಾರವಾರ |

| | | |
|---|---|---|
| 5 | ಆನ್ ಲೈನ್ ಟೆಂಡರ್ ತೆರೆಯುವ ದಿನಾಂಕ / ಸಮಯ | ದಿನಾಂಕ:06 -09-2017 ಬೆಳಿಗ್ಗೆ 11–00 ಗಂಟೆಗೆ |
| 6 | ಇ.ಎಂ. ಡಿ. ಮೊತ್ತ | ಟೆಂಡರ್ ನ ಮೊತ್ತ 2% ರಷ್ಟು ರೂ. 50000/-<br>e– payment or NEFT ಮೂಲಕ ಪಾವತಿ ಮಾಡುವುದು |

<u>ಸಾಮಾನ್ಯ ಷರತ್ತುಗಳು:</u>

1. ಯಶಸ್ವಿ ಟೆಂದರದಾರರು ಈ ಕಚೇರಿಗೆ ಸದರಿ ವಿದ್ಯುನ್ಮಾನ ಯಂತ್ರಗಳ ಮಾದರಿ ನೀಡಿ ಒಪ್ಪಿಗೆ ಆದ ನಂತರವೆ ಸಾಮಗ್ರಿಗಳನ್ನು ಪೂರೈಸುವುದು.
2. ಟೆಂಡರ್ ದಾರರು ಮೇಲ್ಕಂಡ ಸದರಿ ವಿದ್ಯುನ್ಮಾನಗಳ ದರವನ್ನು ಆನ್ ಲೈನ್ ಮೂಲಕ ಸಲ್ಲಿಸುವಾಗ ಒಂದೇ ನಿಖರವಾದ ದರವನ್ನು ನಮೂದಿಸತಕ್ಕದ್ದು.
3. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು 2000 ದ ನಿಯಮ 27 ರನ್ವಯ ಇ-ಆಡಳಿತದಿಂದ ಪೂರ್ವಾರ್ಹತೆ ಹೊಂದಿರುವ ಟೆಂಡರುದಾರರು (Pre qualified tenderers duly empanelled by e-governance) ಮಾತ್ರ ಆನ್ ಲೈನ್ ಮೂಲಕ ಟೆಂಡರ್ ಗಳನ್ನು ಸಲ್ಲಿಸಲು ಅವಕಾಶ ಇರುತ್ತದೆ. ಪೂರ್ವಾರ್ಹತೆಗೆ ಅವಶ್ಯವಿರುವ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್ ಲೈನ್ ಟೆಂಡರ್ ಜೊತೆ ಸಲ್ಲಿಸತಕ್ಕದ್ದು
4. ಪ್ರೊಕ್ಯೂರಮೆಂಟ್ ಪ್ರೋಸೆಸಿಂಗ್ ಶುಲ್ಕವನ್ನು ಇ ಪ್ರೊಕ್ಯೂರಮೆಂಟ್ ಪೋರ್ಟಲ್ ಭರಿಸತಕ್ಕದ್ದು.
5. ಆನ್ ಲೈನ್ ಟೆಂಡರ್ ಅರ್ಜಿಗಳನ್ನು ಈ ಕಾರ್ಯಾಲಯದಲ್ಲಿ ಹಾಜರಿರುವ ಟೆಂಡರ್ ದಾರರ ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ವೆಬ್ ಸೈಟಿನಲ್ಲಿ ತೆರೆಯಲಾಗುವುದು.
6. ಟೆಂಡರ್ ನಲ್ಲಿ ನಮೂದಿಸುವ ದರವು ಎಕ್ಸೈಜ್ ಡ್ಯುಟಿ, ಸಿ.ಎಸ್. ಟಿ., ವ್ಯಾಟ್ ತೆರಿಗೆ, ಸಾಗಣಿಕೆ ವೆಚ್ಚ ಇತ್ಯಾದಿ ಎಲ್ಲ ವೆಚ್ಚಗಳನ್ನು ಒಳಗೊಂಡಿರತಕ್ಕದ್ದು. ಇದರ ಹೊರತಾಗಿ ಯಾವುದೇ ರೀತಿಯ ಹೆಚ್ಚಿನ ವೆಚ್ಚವನ್ನು ಈ ಕಚೇರಿಯಿಂದ ಪಾವತಿಸಲಾಗುವುದಿಲ್ಲ.
7. ಟೆಂಡರ್ ದಾರರು ಕರ್ನಾಟಕ ತೆರಿಗೆ ಇಲಾಖೆಯ ನೋಂದಣಿ ಪ್ರಮಾಣ ಪತ್ರ (ವ್ಯಾಟ್) ವೃತ್ತಿ ತೆರಿಗೆ ನೋಂದಣಿ ಪ್ರಮಾಣ ಪತ್ರ, ಸೇವಾ ತೆರಿಗೆ ಇಲಾಖೆಯ ನೋಂದಣಿ ಪತ್ರ, ಟಿನ್ ಸಂಖ್ಯೆ, ಪ್ರಸಕ್ತ ಸಾಲಿನಲ್ಲಿ ನವೀಕರಿಸಿ ಚಾಲ್ತಿಯಲ್ಲಿರುವ ನೋಂದಣಿ ಪತ್ರ ಡೀಲರ್ ಶಿಪ್ ಪತ್ರ ಇತ್ಯಾದಿ ಅವಶ್ಯಕ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ ಆನ್ ಲೈನ್ ಟೆಂಡರ್ ಜೊತೆಗೆ ಸಲ್ಲಿಸತಕ್ಕದ್ದು.
8. ಅಂಗೀಕೃತ ಟೆಂಡರ್ ದಾರರು ಸದರಿ ವಿದ್ಯುನ್ಮಾನಯಂತ್ರಗಳನ್ನು ಪೂರೈಸಲು ಕಾರ್ಯಾಲಯದಿಂದ ಪೂರೈಕೆ ಆದೇಶ (Supply/Purchase Order) ಹೊರಡಿಸಿದ 08 ದಿನದೊಳಗಾಗಿ ಸಾಮಗ್ರಿಗಳನ್ನು (ಒರಿಜಿನಲ್ ಬ್ಯಾಂಡ್/ಕಂಪನಿಯದ್ದು) ಒಳ್ಳೆಯ ಸ್ಥಿತಿಯಲ್ಲಿ ಪೂರೈಸಿ ಬಿಲ್ಲುಗಳನ್ನು ಪಾವತಿಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು. ಸದರಿ ವಿದ್ಯುನ್ಮಾನ ಯಂತ್ರಗಳನ್ನು ನುರಿತ ಪರಿಣಿತರಿಂದ (Third Party) ರವರಿಂದ ಪರೀಕ್ಷಿಸಿ ಅವರು ನಿರಾಕ್ಷೇಪಣಾ ಪತ್ರ ನೀಡಿದ ನಂತರವೇ ಬಿಲ್ಲಿನ ಹಣ ಸಂದಾಯ ಮಾಡಲಾಗುವುದು.
9. ಪೂರೈಸಲಾದ ವಸ್ತುಗಳ ಗುಣಮಟ್ಟ ಸರಿ ಇಲ್ಲದಿದ್ದಲ್ಲಿ ಸದರಿ ವಸ್ತುಗಳನ್ನು ತಿರಸ್ಕರಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.
10. ಗಣಕಯಂತ್ರ, ಪ್ರಿಂಟರ್ ಮತ್ತು ಸ್ಕ್ಯಾನರ್ ಗಳ Configuration ನ್ನು ಎನ್.ಐ.ಸಿ. ಇವರಿಂದ ಪಡೆದ ವಿವರಗಳಂತೆ ನಿಗದಿ ಪಡಿಸುವುದು (ಪ್ರತಿ ಲಗ್ತ ಇಟ್ಟಿದೆ)
11. ಪೂರೈಕೆ ಮಾಡುವ ಎಲ್ಲಾ ಸಾಮಗ್ರಿಗಳಿಗೆ 3 ವರ್ಷಗಳ ಗ್ಯಾರಂಟಿ/ವಾರಂಟಿ ಅವಧಿಯನ್ನು ನಿಗದಿಪಡಿಸುವುದು.

12. ಯು.ಪಿ.ಎಸ್. Configuration UPS with internal battery backup time 45 minutes ನಿಗದಿಪಡಿಸುವುದು.

13. ಆನ್ ಲೈನ್ ನಲ್ಲಿ ಸ್ವೀಕೃತವಾಗುವ ಯಾವುದೇ ಟೆಂಡರ್ ಗಳನ್ನು ಒಪ್ಪುವ ಅಥವಾ ಯಾವುದೇ ಕಾರಣಗಳನ್ನು ನೀಡದೇ ಟೆಂಡರ್ ಗಳನ್ನು ತಿರಸ್ಕರಿಸುವ ಅಧಿಕಾರಿವನ್ನು ಜಿಲ್ಲಾಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

14. ಯಶಸ್ವಿ ಟೆಂಡರ್ ದಾರರಿಗೆ ನೀಡಿದ ಆದೇಶವನ್ನು ಯಾವುದೇ ಹಂತದಲ್ಲಿ ರದ್ದುಪಡಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಗಳು ಹೊಂದಿರುತ್ತಾರೆ.

15. ಮೇಲೆ ನಮೂದಿಸಿದ ದಿನಾಂಕಗಳು ಒಂದು ವೇಳೆ ' ಸರಕಾರಿ ರಜಾದಿನ" ಎಂದು ಘೋಷಣೆಯಾದರೆ ಮರುದಿನದ ಸರಕಾರಿ ಕೆಲಸದ ದಿನವನ್ನು ಕೊನೆಯ ದಿನಾಂಕವೆಂದು ಪರಿಗಣಿಸಲಾಗುವುದು.

16. ಅವಧಿ ಮೀರಿ ಬಂದ ಆನ್ ಲೈನ್ ಟೆಂಡರ್ ಗಳನ್ನು ಯಾವುದೇ ಕಾರಣಕ್ಕೂ ಸ್ವೀಕರಿಸಲಾಗುವುದಿಲ್ಲ

17. ಟೆಂಡರ್ ಷರತ್ತುಗಳು ಎಲ್ಲಾ ನಿಭಂದನೆಗಳಿಗೆ ಒಪ್ಪಿರುವುದರ ಬಗ್ಗೆ ಯಶಸ್ವಿಯಾದ ಟೆಂಡರ್ ದಾರರು ರೂ. 100/- ಛಾಪಾ ಕಾಗದದಲ್ಲಿ ಮುಚ್ಚಳಿಕೆ ಪತ್ರವನ್ನು ಈ ಕಾರ್ಯಾಲಯಕ್ಕೆ ಬರೆದು ನೀಡತಕ್ಕದ್ದು.

18. ಹೆಚ್ಚಿನ ವಿವರಗಳಿಗಾಗಿ ಈ ಕಾರ್ಯಾಲಯವನ್ನು ಖುದ್ದಾಗಿ ಕಚೇರಿ ವೇಳೆಯಲ್ಲಿ (ಸರಕಾರಿ ರಜಾದಿನಗಳನ್ನು ಹೊರತುಪಡಿಸಿ) ಸಂಪರ್ಕಿಸಿಬಹುದಾಗಿದೆ. ಅಥವಾ ದೂರವಾಣಿ ಸಂಖ್ಯೆ: 08382/222072 ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿದೆ. ಹಾಗೂ ವೈಬ್ ಸೈಟ್: https://eproc.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದಾಗಿದೆ.

19. ಪ್ರಸ್ತುತ ಟೆಂಡರ್ ಪ್ರಕಟಣೆಯನ್ನು Website Address : http://uttarakannada.nic.in ನಲ್ಲೂ ವೀಕ್ಷಿಸಬಹುದಾಗಿದೆ.

(ಎಸ್. ಎಸ್. ನಕುಲ್)
ಜಿಲ್ಲಾಧಿಕಾರಿ,
ಉತ್ತರ ಕನ್ನಡ, ಕಾರವಾರ.

ಪ್ರತಿ:

1. ಪ್ರೊಗ್ರಾಮರ್, ವಿಪತ್ತು ನಿರ್ವಹಣೆ, ಹಾಗೂ ಜಿಲ್ಲಾ ಸಮಾಲೋಚಕರು, ಜಿಲ್ಲಾಧಿಕಾರಿಗಳ ಕಾರ್ಯಾಲಯ ಕಾರವಾರ ಇವರಿಗೆ ಪ್ರಸ್ತುತ ಇ-ಟೆಂಡರ್ ಪ್ರಕಟಣೆಯನ್ನು https://eproc.karnataka.gov.in ನಲ್ಲಿ ಅಳವಡಿಸಿ ಈ KLLADS ಶಾಖೆಗೆ ವರದಿ ಸಲ್ಲಿಸಲು ಸೂಚಿಸಿ ಕಳುಹಿಸಿದೆ.
2. *ಡಿಸ್ಟ್ರಿಕ್ ಇನ್ ಫಾರ್ಮಟಿಕ್ ಆಫೀಸರ್, ಎನ್.ಐ.ಸಿ. ಜಿಲ್ಲಾ ಪಂಚಾಯತ, ಉ.ಕ. ಕಾರವಾರ ಇವರಿಗೆ ಸದರಿ ಪ್ರಕಟಣೆಯನ್ನು* Website Address : http://uttarakannada.nic.in ನಲ್ಲಿ ಅಳವಡಿಸಲು ಹಾಗೂ ಟೆಂಡರ್ ತೆರೆಯುವ ದಿನ/ ಸಮಯದಲ್ಲಿ ಈ ಕಚೇರಿಯಲ್ಲಿ ಹಾಜರ ಇರಲು ತಿಳಿಸಿ ಕಳುಹಿಸಿದೆ.
3. *ಈ ಕಾರ್ಯಾಲಯದ ಟೆಂಡರ್ ಬುಲೆಟನ್ ವಿಭಾಗಕ್ಕೆ - ವಾರಾಂತ್ಯದ ಟೆಂಡರ್ ಬುಲೆಟಿನ್ ನಲ್ಲಿ ಪ್ರಕಟಿಸಲು ಪ್ರತಿಗಳನ್ನು ಕಳುಹಿಸಿದೆ.*
4. *ಜಿಲ್ಲಾ ವಾರ್ತಾಧಿಕಾರಿಗಳು ವಾರ್ತಾಭವನ ಕಾರವಾರ ರವರಿಗೆ ರಾಜ್ಯ ಮಟ್ಟದ ಹಾಗೂ ಸ್ಥಳಿಯ ಮಟ್ಟದ ಪತ್ರಿಕೆಗಳಲ್ಲಿ ಜಾಹಿರಾತು ಪ್ರಕಟಪಡಿಸಲು ಕಳುಹಿಸಿದೆ.*
5. *ಈ ಕಚೇರಿಯ ಸೂಚನಾ ಫಲಕ್ಕೆ.*